MYSORE LEGISLATIVE ASSEMBLY

FORTY-FIFTH DAY.

Tuesday, 19th April 1955.

The House met in the Assembly Hall, Old Public Offices, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS.

Veterinary Dispensaries in Kudligi Taluk.

Q.—708. Sri KOTRA BASAVANA GOUD (Kudligi).—

Will the Government be pleased to state :—

whether they will open a Veterinary Dispensary in each of the firka head-quarters of the Kudligi Taluk ?

A.—Dr. R. NAGAN GOWDA (Minister for Agriculture).—

No.

ಶ್ರೀ ಕೊಟ್ರ ಬಸವನಗೌಡ.—ಪಶುವೈದ್ಯಶಾಲೆಯನ್ನು ಸ್ಥಾಪಿಸುವುದರಲ್ಲಿ ಸರ್ಕಾರದ Policy ಏನು ?

ಡಾ॥ ಆರ್. ನಾಗನಗೌಡ.—ಲೆಲಿತ್‌ಗೋ ಕಮಿಷರಿಯೇಟ್ ರಿಪೋರ್ಟಿನ ಪ್ರಕಾರ ಪ್ರತಿ 25 ಸಾವಿರ ಜಾನುವಾರುಗಳಿಗೆ ಒಂದು ಆಸ್ಪತ್ರೆ ಇರಬೇಕು ಎಂದು ಇದೆ. ಮೈಸೂರಿನಲ್ಲಿ 27 ಸಾವಿರ ಜಾನುವಾರುಗಳಿಗೆ ಒಂದು ಆಸ್ಪತ್ರೆ ಇದೆ. ಆದರೆ ಈ ರೇಟ್ ಬಳ್ಳಾರಿಗೆ ಅನ್ವಯಿಸುವುದಿಲ್ಲ.

ಶ್ರೀ ಕೊಟ್ರ ಬಸವನಗೌಡ.—ಅದು ಅನ್ವಯಿಸ ಬೇಕಾದರೆ ಎಷ್ಟು ವರ್ಷಗಳು ಬೇಕಾಗುತ್ತವೆ ?

ಡಾ॥ ಆರ್. ನಾಗನಗೌಡ.—ಕೂಡ್ಲಿಗಿ ತಾಲ್ಲೂಕಿನಲ್ಲಿ 96 ಸಾವಿರ ಜಾನುವಾರುಗಳು ಇವೆ. ಈಗ ಆಲ್ಲಿ ಒಂದು Minor dispensary ಮತ್ತು ಇನ್ನೊಂದು Touring dispensary ಎಂದು ಎರಡಿವೆ. ಈ ವರುಷ ಈ ಎರಡು institutions ಗಳನ್ನು regular ತಾಲ್ಲೂಕ್ ಡಿಸ್ಪೆನ್ಸರಿಗಳನ್ನಾಗಿ ಮಾಡಬೇಕು ಎಂದು ಇದ್ದೇವೆ. ಇನ್ನೂ ಎರಡು ಬೇಕಾಗುತ್ತವೆ. ಮುಂದಕ್ಕೆ ಮಾಡಬೇಕು. ಈಗ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಕೊಟ್ರ ಬಸವನಗೌಡ.—96 ಸಾವಿರ ಜಾನುವಾರುಗಳು ಇವೆಯೆಂದು ಹೇಳಿದಿರಿ. ಅವುಗಳಲ್ಲಿ sheep and goats ಸೇರಿವೆಯೇ ?

ಡಾ॥ ಆರ್. ನಾಗನಗೌಡ.—Dispensary ಏರ್ಪಾಡು ಮಾಡುವಾಗ Cattle Population ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳುತ್ತಾರೆ ; sheep ಮತ್ತು goats ಅದರೊಳಗೆ ಸೇರುವುದಿಲ್ಲ.

ಶ್ರೀ ಕೊಟ್ರ ಬಸವನಗೌಡ.—ಹೊಸಹಳ್ಳಿಯಲ್ಲಿ Touring Hospital open ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಕೂಡ್ಲಿಗಿಯಲ್ಲಿ ಒಂದು ಮತ್ತು ಕೊಟ್ಟೂರಿನಲ್ಲಿ ಇರುವ ಒಂದು Touring Dispensaryಯನ್ನು regular dispensaryಗಳಾಗಿ ಮಾಡುತ್ತೇವೆ. ಹೊಸಹಳ್ಳಿಯಲ್ಲಿ dispensary ಪ್ರಾರಂಭ ಮಾಡುವ ವಿಷಯವನ್ನು ಮುಂದಕ್ಕೆ ಆಲೋಚನೆ ಮಾಡಬೇಕು.

ಶ್ರೀ ಎಸ್. ಪರಮೇಶ್ವರಪ್ಪ.—ತಾಲ್ಲೂಕಿನಲ್ಲಿ ಎರಡು dispensary ಏರ್ಪಡಿಸಿದಂತಾಯಿತು ಅಲ್ಲವೆ ?

ಡಾ॥ ಆರ್. ನಾಗನಗೌಡ.—ಈ ತಾಲ್ಲೂಕಿನಲ್ಲಿ ಎರಡು dispensary ಇಡುವ ಲೆಖ್ಖಾಚಾರವಿಲ್ಲ. ಜಾನುವಾರು ಎಷ್ಟು ಇವೆ, ಅವಕ್ಕೆ ತಕ್ಕಂತೆ ಎರಡು ಅಥವಾ ಮೂರು ಆಸ್ಪತ್ರೆಗಳು ಬೇಕೇ ಎಂಬುದನ್ನು ನೋಡಿ ಕ್ರಮೇಣ ಹೆಚ್ಚಿಸುತ್ತಾ ಹೋಗಬೇಕು.

ಶ್ರೀ ಬಿ. ಸಿ. ನಂಜುಂಡಯ್ಯ.—1955-56ನೇ ಇಸವಿಯಲ್ಲಿ ಎಷ್ಟು ಜಾನುವಾರು dispensaryಗಳನ್ನು ಪ್ರಾರಂಭ ಮಾಡಬೇಕೆಂದು ಇದ್ದೀರಿ ?

Dr. R. NAGAN GOWDA.—I should like to have notice for that.

Committee to Select Films.

Q.—860. Sri S. SRINIVASA IYENGAR (T.-Narasipur).—

Will the Government be pleased to state :—

whether there is any committee to select films fit for exhibition in the theatres in Mysore State ?

A.—Sri H. SIDDAVEERAPPA (Minister for Home and Industries).—

There is no committee in Mysore State for this purpose. The Central Board of Film Censors and the Regional Boards certify the films for exhibition throughout India.

Sri S. SRINIVASA IYENGAR.—Sir, may I know in which region Mysore State has been grouped ?